■ ವಿಶಾಖ ಎನ್

# ‘ನಟಿಯಾಗು’ ಎಂದಾಗ ಕಣ್ಣೀರಿಟ್ಟಿದ್ದ ಪ್ರಿಯಾಂಕಾ



ಪ್ರಿಯಾಂಕಾ ಚೋಪ್ರಾ ಕಣ್ಣಲ್ಲಿ ನೀರು ತುಂಬಿಕೊಂಡು ನಿಂತಿದ್ದರು. ತಲಪತಿ (ದಳಪತಿ ಎನ್ನೋಣ) ವಿಜಯ್ ಸಿನಿಮಾದಲ್ಲಿ ನಾಯಕಿಯಾಗುವ ಅವಕಾಶ ಬಂದಿದೆ ಎಂಬ ಸುದ್ದಿ ಕಿವಿಗೆ ಹಾಕುತ್ತಿದ್ದಂತೆ ಅವರು ಹಾಗೆ ವರ್ತಿಸಿದ್ದು, ಅಚ್ಚರಿಯಾಗಿ ಕಾಣಬಹುದು. ನಿಜಕ್ಕೂ ಪ್ರಿಯಾಂಕಾ ಆಗ ಅಷ್ಟು ಮುಗ್ಧರಾಗಿಯೇ ಇದ್ದರು. ಪ್ರಿಯಾಂಕಾ ತಾಯಿ ಮಧು ಚೋಪ್ರಾ ಇತ್ತೀಚೆಗೆ ಜಾಲತಾಣವೊಂದಕ್ಕೆ ನೀಡಿದ ಸಂದರ್ಶನದಲ್ಲಿ ತಮ್ಮ ಮಗಳ ವೃತ್ತಿಬದುಕಿನ ಮೊದಲ ದಿನಗಳನ್ನು ಮೆಲುಕು ಹಾಕಿದರು.

ಪ್ರಿಯಾಂಕಾ ವಿಶ್ವಸುಂದರಿ ಕಿರೀಟ ತೊಟ್ಟಿದ್ದು 2000ರಲ್ಲಿ. ಅದಾಗಿ ಎರಡು ವರ್ಷಗಳ ನಂತರ ಅವರಿಗೆ ತಮಿಳು ಸಿನಿಮಾಕ್ಕೆ ಅವಕಾಶ ಹುಡುಕಿಕೊಂಡು ಬಂದಿತು.

ರೂಪದರ್ಶಿ ಆಗುವ ಮೊದಲು ಪೋಷಕರಿಂದ ಪ್ರತಿರೋಧ ಎದುರಿಸಿದ್ದ ಅವರಿಗೆ ನಟಿಯಾಗುವ ಬಯಕೆ ಇರಲಿಲ್ಲ. ಅದನ್ನು ಅವರು ತಾಯಿ ಮಧು ಅವರಲ್ಲಿ ಹೇಳಿದರು. ಹಾಗೆ ಹೇಳುವಾಗಲೇ ಕಣ್ಣಲ್ಲಿ ನೀರು ತುಂಬಿಕೊಂಡಿದ್ದು. ತಾಯಿಗೆ ಮಗಳ ಭವಿಷ್ಯ ನಟಿಯಾಗುವುದರಲ್ಲಿ ಇದೆ ಎಂದು ಆಗಲೇ ಅನಿಸಿತ್ತು. ಹೀಗಾಗಿ ಅವರು ಬಂದ ಅವಕಾಶವನ್ನು ಒಪ್ಪಿಕೊಳ್ಳುವಂತೆ ಮಗಳಿಗೆ ತಿಳಿಹೇಳಿದರು.

‘ತಮಿಳನ್’ ಎಂಬ ಸಿನಿಮಾದಲ್ಲಿ ಪ್ರಿಯಾಂಕಾ ಮೊದಲು ನಟಿಸಿದ್ದು. ಚಿತ್ರೀಕರಣ ಶುರುವಾದ ಮೇಲೆ ಅವರಿಗೆ ಇನ್ನೊಂದು ರೀತಿಯ ಪೀಕಲಾಟ ಕಾಡಿತು. ರಾಜು ಸುಂದರಂ ನೃತ್ಯ ನಿರ್ದೇಶನದಲ್ಲಿ ಹಾಡೊಂದರ ಚಿತ್ರಿಕರಣ ನಡೆಯುತ್ತಿತ್ತು. ವಿಜಯ್ ನೃತ್ಯದಲ್ಲಿ ಪಳಗಿದ್ದರು. ಅವರಿಗೆ ಸರಿಸಾಟಿಯಾಗಿ ನೃತ್ಯ ಮಾಡುವಷ್ಟು ಪರಿಣತಿ ಪ್ರಿಯಾಂಕಾಗೆ ಆಗಿರಲಿಲ್ಲ. ಮೊದಮೊದಲು ಅವರಿಗೆ ನೃತ್ಯ ಅಸಾಧ್ಯವೇನೋ ಅನಿಸಿತು. ಅದನ್ನೇ ಸವಾಲಾಗಿ ಸ್ವೀಕರಿಸಿದರು. ಬೆಳಿಗ್ಗೆಯಿಂದ ಸಂಜೆತನಕ ಆ ಹಾಡಿನ ನೃತ್ಯದ ವರಸೆಗಳನ್ನು ಅಭ್ಯಾಸ ಮಾಡಿದರು. ಪಟ್ಟುಹಿಡಿದು ಕಲಿತ ಮೇಲೆ, ಆತ್ಮವಿಶ್ವಾಸ ಬಂತು. ಕ್ರಮೇಣ ಸಿನಿಮಾ ಚಿತ್ರೀಕರಣದ ಅನುಭವವೂ ಅವರಿಗೆ ಇಷ್ಟವಾಯಿತು ಎಂದು ಪ್ರಿಯಾಂಕಾ ತಾಯಿ ಮಧು ಸ್ಮರಿಸಿಕೊಂಡರು.

ಬಾಲಿವುಡ್ ನಟಿಯರಲ್ಲಿ ಕೆಲವರು ತಮ್ಮ ದಕ್ಷಿಣ ಭಾರತದ ಚಿತ್ರರಂಗದ ಪ್ರಯಾಣವನ್ನು ಮೆಲುಕು ಹಾಕಲು ಇಷ್ಟಪಡುವುದಿಲ್ಲ. ಪ್ರಿಯಾಂಕಾ ಅದಕ್ಕೆ ಅಪವಾದ. ದೀಪಿಕಾ ಪಡುಕೋಣೆ ಅವರೂ ಕನ್ನಡ ಸಿನಿಮಾದಲ್ಲಿ ತಾವು ಮೊದಲು ನಟಿಸಿದ್ದು ಎಂದು ಎಲ್ಲಿಯೂ ಹೇಳಿಕೊಳ್ಳುವುದಿಲ್ಲ. ■



# ಜಾಹ್ನವಿಯ ಬಾಲ್ಯದ ಚಿತ್ತಭ್ರಾಂತಿ

ಶ್ರೀದೇವಿ ಪುತ್ರಿ ಜಾಹ್ನವಿ ಕಪೂರ್ ಅವರಿಗೆ ಮತಿಭ್ರಾಂತಿಯೊಂದು ಚಿಕ್ಕಂದಿನಲ್ಲಿ ಕಾಡುತ್ತಿತ್ತಂತೆ. ಅವರ ತಂದೆ–ತಾಯಿ ಸ್ವಲ್ಪ ಹೊತ್ತು ದೂರವಾದರೂ, ಅವರಿನ್ನು ಮರಳಿ ಬರುವುದೇ ಇಲ್ಲವೇನೋ ಎಂದು ಅವರು ಪರಿತಪಿಸುತ್ತಿದ್ದರಂತೆ.

ವಿಮಾನ ನಿಲ್ದಾಣದಲ್ಲಿ ತೆರಿಗೆ ತಪ್ಪಿಸಿಕೊಳ್ಳಬಹುದಾದ ವಸ್ತುಗಳ ಖರೀದಿಗೆಂದು ಅಪ್ಪ–ಅಮ್ಮ ಹೋಗುತ್ತಿದ್ದರು. ಆಗ ಅಜ್ಜಿ ಜೊತೆಗೆ ಉಳಿಯುತ್ತಿದ್ದ ಜಾಹ್ನವಿ, ಪದೇ ಪದೇ ಅಜ್ಜಿಯನ್ನು ‘ಅಪ್ಪ–ಅಮ್ಮ ಬರದೇ ಇದ್ದರೆ ಏನು ಮಾಡೋದು’ ಎಂದು ಪ್ರಶ್ನಿಸುತ್ತಿದ್ದರಂತೆ. ತಮ್ಮ ಬಾಲ್ಯದ ಮನಃಸ್ಥಿತಿಯನ್ನು ಅವರು ಇತ್ತೀಚೆಗೆ ನಿಸ್ಸಂಕೋಚವಾಗಿ ಹೇಳಿಕೊಂಡರು.

2018ರಲ್ಲಿ ನಟಿ ಶ್ರೀದೇವಿ ಸಂಶಯಾಸ್ಪದ ರೀತಿಯಲ್ಲಿ ಸಾವನ್ನಪ್ಪಿದರು. ಆ ಸಂದರ್ಭದಲ್ಲಿ ಜಾಹ್ನವಿ ಸಾಕಷ್ಟು ಕುಸಿದಿದ್ದರು. ‘ಧಡಕ್’ ಸಿನಿಮಾ ನಾಯಕಿಯಾಗಿ ಅದಾಗಲೇ ಅಭಿನಯಿಸಿದ್ದರು. ಚಿತ್ರ ಬಿಡುಗಡೆಯಾಗಬೇಕಿತ್ತು. ಆ ಹಂತದಲ್ಲಿ ತಾಯಿಯ ಸಾವನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ.

‘ಅಮ್ಮ ನನ್ನ ನೆರಳಿನಂತೆ ಇದ್ದರು. ಅವರ ಸಾವು ನನಗೆ ಆಘಾತ ಒಡ್ಡಿತ್ತು. ಅದರಿಂದ ಹೊರಬರಲು ಸಾಕಷ್ಟು ಸಮಯ ಬೇಕಾಯಿತು. ಅವರು ನಾನು ಏನು ಆಗಬೇಕು ಎಂದು ಬಯಸಿದ್ದರೋ ಅದಾಗುವುದು ಹೇಗೆ ಎನ್ನುವ ಪ್ರಶ್ನೆ ಕೂಡ ಎದುರಲ್ಲಿ ಇತ್ತು. ಎಲ್ಲ ನೋವನ್ನೂ ಮೀರಿ ಈಗ ಈ ಸ್ಥಿತಿಯಲ್ಲಿ ಇದ್ದೇನೆ. ನಾನೀಗ ಮೊದಲಿಗೆ ಹೋಲಿಸಿದರೆ ಯಾರ ಜೊತೆಗೂ ಹೆಚ್ಚು ಅನ್ಯೋನ್ಯವಾಗಿ ಇರುವುದಿಲ್ಲ. ಒಂದು ವೇಳೆ ಆ ಅನ್ಯೋನ್ಯತೆ ಕಡಿದುಹೋದರೆ ಆಗುವ ನೋವು ಅಷ್ಟಿಷ್ಟಲ್ಲ’ ಎಂದು ಜಾಹ್ನವಿ ಸದ್ಯದ ತಮ್ಮ ಮನೋಭೂಮಿಕೆಯನ್ನು ಬಿಚ್ಚಿಟ್ಟರು.

ಈಗ ಜಾಹ್ನವಿ ಕೈಯಲ್ಲಿ ಐದಾರು ಚಿತ್ರಗಳಿವೆ. ತಮ್ಮ ಫ್ಯಾಷನ್ ಸ್ಟೇಟ್‌ಮೆಂಟ್ ಮೂಲಕ ಸದಾ ಚಾಲ್ತಿಯಲ್ಲಿ ಇರುತ್ತಾರೆ. ತಮಿಳು ನಟ ಸೂರ್ಯ ಅವರಿಗೂ ಜೋಡಿಯಾಗಿ ನಟಿಸಲಿದ್ದಾರೆ ಎನ್ನುವುದು ಅವರ ವೃತ್ತಿ ಬದುಕಿನ ಕುರಿತು ಭರವಸೆಗಳನ್ನು ಮೂಡಿಸಿದೆ. ■